ಉತ್ತರ ಕೊಟ್ಟಿದ್ದಾರೆ. ಅದರ ಪರಿಹಾರಕ್ಕೋಸ್ಕರ ಏನು ಮಾಡಿದ್ದೀರಿ ಎಂದು ಕೇಳಿದ್ದಕ್ಕೆ ಏನೂ ಕ್ರಮ ತೆಗೆದುಕೊಂಡಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಬೆಂಗಳೂರು ನಗರದಲ್ಲಿ ದಿನೇ ದಿನೇ ಜನಸಂಖ್ಯೆ ಮತ್ತು ವಾಹನಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಅದರ ಬಗ್ಗೆ ಬೇರೆ ಯಾವ ರೀತಿ ಕ್ರಮವನ್ನು ತೆಗೆದುಕೊಳ್ಳದೆ ಹೋದರೆ ಮುಂದೆ ತುಂಬಾ ಅನಾನುಕೂಲವಾಗುತ್ತದೆ. ಅಲ್ಲದೆ, ಅಪಘಾತವಾಗಿ ಮರಣ ಸಂಭವಿಸುವ ಸಂದರ್ಭವಿರುತ್ತದೆ. ಆದಷ್ಟು ಬೇಗ ಫ್ಲೈ ಓವರ್ ಮತ್ತು ಸಬ್-ವೇಗಳನ್ನು ನಿರ್ಮಾಣ ಮಾಡದೆ ಹೋದರೆ ತುಂಬಾ ಅಪಾಯಕಾರಿ ಸನ್ನಿವೇಶ ಉಂಟಾಗುತ್ತದೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ.ಜೆ. ಜಾರ್ಜ್:- ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಬೆಂಗಳೂರು ನಗರ ಬಹಳ ಬೃಹದಾಕಾರವಾಗಿ ಬೆಳೆಯುತ್ತಿದೆ. ಈ ವಿಚಾರದಲ್ಲಿ ಈಗಾಗಲೇ ಬೆಂಗಳೂರು ನಗರ ಕಾರ್ಪೊರೇಷನ್‌ರವರು ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಇದರಲ್ಲಿ ರೈಲ್ವೆ ಸ್ಟೇಷನ್ ಮುಂದೆ ಒಂದು ಸಬ್-ವೇಯನ್ನು ಮತ್ತು ಕೆಂಪೇಗೌಡ ರಸ್ತೆಗೆ ಸಬ್-ವೇಯನ್ನು ಪ್ರಾರಂಭ ಮಾಡಲಾಗಿದೆ. ಈಗ ಕಾರ್ಪೊರೇಷನ್ ಮುಂದೆ ಮತ್ತು ಮೈಸೂರು ರಸ್ತೆ ಪಕ್ಕದಲ್ಲಿ ಎರಡು ಫ್ಲೈ ಓವರ್‌ಗಳನ್ನು ನಿರ್ಮಿಸಲು 100 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಪ್ರಸ್ತುತ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಆದಷ್ಟು ಬೇಗ ನಿರ್ಮಾಣದ ಕೆಲಸ ತೆಗೆದುಕೊಳ್ಳುತ್ತೇವೆ. ನಂತರ ಮಿನರ್ವ ಚಿತ್ರಮಂದಿರದ ಪಕ್ಕದಲ್ಲಿ 5 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಪಾದಚಾರಿಗಳಿಗೆ ಒಂದು ವ್ಯವಸ್ಥೆ ಮಾಡುತ್ತಿದ್ದೇವೆ. ಆದಷ್ಟು ಶೀಘ್ರವಾಗಿ ಒಂದೊಂದೇ ಕೆಲಸವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಲಕ್ಷ್ಮಣ:- ಮಾನ್ಯ ಅಧ್ಯಕ್ಷರೆ, ಮಲ್ಲೇಶ್ವರಂ ವೃತ್ತದಿಂದ ರಾಜಾಜಿನಗರದ ನವರಂಗ್ ವೃತ್ತದವರೆಗೆ ಫ್ಲೈ ಓವರ್ ಆಗಲಿ, ಸಬ್-ವೇ ಆಗಲಿ ಮಾಡಲೇಬೇಕಾಗಿದೆ. ಏಕೆಂದರೆ, ಈ ಪ್ರದೇಶ ಬೆಂಗಳೂರು ಸಿಟಿಯ ಮಧ್ಯೆ ಇರುವುದರಿಂದ ವಾಹನಗಳ ಮತ್ತು ಜನಸಂಖ್ಯೆಯ ಒತ್ತಡ ಬಹಳ ಹೆಚ್ಚಾಗಿದೆ.

ಶ್ರೀ ಕೆ.ಜೆ. ಜಾರ್ಜ್:- ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಆದಷ್ಟು ಬೇಗ ಈ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಯೋಜನೆ.

104(872). ಶ್ರೀ ಹೆಚ್.ಎಸ್. ಪಾಟೀಲ್ (ಸುಫ್ತಗಿ):- ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೈದ್ರಾಬಾದ್ - ಕರ್ನಾಟಕ ಅಭಿವೃದ್ಧಿ ಯೋಜನೆಯನ್ನು ಎಂದಿನಿಂದ ಜಾರಿಗೆ ತರಲಾಗಿದೆ? ಅಂದಿನಿಂದ 31-1-1992 ರವರೆಗೂ ಪ್ರತಿವರ್ಷ ಖರ್ಚು ಮಾಡಲಾಗಿರುವ ಜಿಲ್ಲಾವಾರು ಮತ್ತು ಇಲಾಖಾವಾರು ಹಣವೆಷ್ಟು?

ಆ) ಗುಲ್ಬರ್ಗ ಕಂದಾಯ ವಿಭಾಗದ ಎಲ್ಲಾ ಜಿಲ್ಲೆಗಳಿಗೂ ಈ ಅಭಿವೃದ್ಧಿ ಅನುದಾನ ಸರಿಯಾಗಿ ನೀಡಿಕೆಯಾಗಿಲ್ಲ ಎಂಬ ಮಾತು ನಿಜವೇ? ಹಾಗಿದ್ದಲ್ಲಿ, ಹಣ ನೀಡಿಕೆಯ ತಾರತಮ್ಯಕ್ಕೆ ಕಾರಣಗಳೇನು? ಸ್ಪಷ್ಟಪಡಿಸುವುದು.

ಇ) ಹೈದ್ರಾಬಾದ್ - ಕರ್ನಾಟಕ ಅಭಿವೃದ್ಧಿ ಯೋಜನೆಯಡಿಯಲ್ಲಿ ರಾಯಚೂರು ಜಿಲ್ಲೆಯ ತಾಲ್ಲೂಕುಗಳು ಯಾವ ವರ್ಷಗಳಲ್ಲಿ ಯಾವ ಇಲಾಖೆಗಳ ಮತ್ತು ಯಾವ ಉದ್ದೇಶಗಳಿಗೆ 31-1-92 ರವರೆಗೂ ಉಪಯೋಗಿಸಿಕೊಂಡಿರುವ ಹಣವೆಷ್ಟು? ಹಾಗಿಲ್ಲದಿದ್ದಲ್ಲಿ ಕಾರಣಗಳೇನು?

ಈ) ಹೈದ್ರಾಬಾದ್ - ಕರ್ನಾಟಕ ಅಭಿವೃದ್ಧಿಯೋಜನೆ ಸಲುವಾಗಿ ಕೇಂದ್ರ ಸರಕಾರ ವಿಶೇಷ ಅನುದಾನ ನೀಡಲು ಯೋಜನಾ ಆಯೋಜನಾ ಆಯೋಗ ಶಿಫಾರಸ್ಸು ಮಾಡಿದೆಯೇ? ಹಾಗಿದ್ದಲ್ಲಿ ಅದು ಯಾವ ಹಂತದಲ್ಲಿದೆ?

ಉ) ಹೈದ್ರಾಬಾದ್ - ಕರ್ನಾಟಕ ಅಭಿವೃದ್ಧಿಯೋಜನೆ ಅನುಷ್ಠಾನ ಮಂಡಳಿ ಸ್ವಾಯತ ಮಂಡಳಿಯಾಗಿ ರಚಿತಗೊಂಡಿದೆಯೇ? ಹಾಗಿದ್ದಲ್ಲಿ ಸದಸ್ಯರ ಮತ್ತು ಅಧ್ಯಕ್ಷರ ನಾಮಕರಣ ಸರಕಾರ ಮಾಡಿದೆಯೇ ವಿಳಂಬಕ್ಕೆ ಕಾರಣಗಳೇನು?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಯೋಜನಾ, ಸಾಂಖ್ಯಿಕ ವೆಚ್ಚಗಳು ಮತ್ತು ಸಾಂಖ್ಯಿಕ ಸಚಿವರು.):-

ಅ) ಹೈದ್ರಾಬಾದ್ - ಕರ್ನಾಟಕ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮವನ್ನು 1989-90ನೇ ಸಾಲಿನಲ್ಲಿ ಪ್ರಾರಂಭಿಸಲಾಯಿತು. 1990-91 ಮತ್ತು 1991-92 (15-2-92ರ ಅಂತ್ಯದ ವರೆಗೆ) ಸಾಲಿನಲ್ಲಿ ಆದ ಖರ್ಚಿನ ವಿವರಗಳನ್ನು ಕೆಳಗೆ ಕೊಡಲಾಗಿದೆ.

(ಕೋಟಿ ರೂಪಾಯಿಗಳಲ್ಲಿ)

1. 1990-91	50.09
2. 1991-92 (15-2-92ರ ಅಂತ್ಯದ ವರೆಗೆ)	35.22
ಒಟ್ಟು	85.31

ಜಿಲ್ಲಾವಾರು ಮತ್ತು ವಲಯವಾರು ವಿವರಗಳನ್ನು ಲಗತ್ತಿಸಲಾಗಿದೆ.

ಆ) ಗುಲ್ಬರ್ಗಾ ಕಂದಾಯ ವಿಭಾಗದ ನಾಲ್ಕು ಜಿಲ್ಲೆಗಳಿಗೆ ಅನುದಾನವನ್ನು ಹಂಚಿಕೊಡುವ ವಾಡಿಕೆಯನ್ನು ಉನ್ನತಾಧಿಕಾರದ ಸಮಿತಿಯಿಂದ ಅನುಸರಿಸಲಾಗುತ್ತಿಲ್ಲ. ಕಾಮಗಾರಿಗಳನ್ನು ಮಂಜೂರು ಮಾಡುವಾಗ ಪ್ರದೇಶದ ಅವಶ್ಯಕತೆಗಳು, ಆದ್ಯತೆ ಮತ್ತು ಅವುಗಳಿಂದ ದೊರಕಬಹುದಾದ ಅನುಕೂಲತೆಗಳನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ.

ಇ) ಹೈದ್ರಾಬಾದ್ - ಕರ್ನಾಟಕ ಪ್ರದೇಶ ಅಭಿವೃದ್ಧಿಯೋಜನೆಯಡಿಯಲ್ಲಿ 1990-91 ಮತ್ತು 1991-92 (15-2-92ರ ಅಂತ್ಯದ ವರೆಗೆ) ಆದ ಖರ್ಚಿನ ವಿವರಗಳನ್ನು ಕೆಳಗೆ ಕೊಡಲಾಗಿದೆ.

(ಕೋಟಿ ರೂಪಾಯಿಗಳಲ್ಲಿ)

1. 1990-91	9.13
2. 1991-92	8.32
ಒಟ್ಟು	17.45

ವಲಯವಾರು ವಿವರಗಳನ್ನು ಲಗತ್ತಿಸಲಾಗಿದೆ. ತಾಲ್ಲೂಕು ವಿವರಗಳು ತಕ್ಷಣ ಲಭ್ಯವಿಲ್ಲ.

ಈ) - ಇಲ್ಲಾ -

ಉ) ಹೈದ್ರಾಬಾದ್ - ಕರ್ನಾಟಕ ಅಭಿವೃದ್ಧಿ ಮಂಡಳಿಯ ರಚನೆಯ ಬಗ್ಗೆ ಮಸೂದ ಅಂಗೀಕೃತವಾಗಿದ್ದು, ಕಾಯ್ದೆಯನ್ನು ಸರ್ಕಾರದ ರಾಜ್ಯ ಪತ್ರದಲ್ಲಿ ಮಂಡಳಿಯ ರಚನೆ ಮತ್ತು ಎಂದಿನಿಂದ ಕಾಯ್ದೆ ಜಾರಿಗೆ ಬರುತ್ತದೆ ಎಂಬುದರ ಬಗ್ಗೆ ಸರ್ಕಾರವು ತೀವ್ರವಾಗಿ ಪರಿಶೀಲಿಸುತ್ತಿದೆ.

STATEMENT SHOWING THE DISTRICTWISE & SECTORWISE EXPENDITURE UNDER HYDERABAD KARNATAKA DEVELOPMENT PROGRAMME FOR THE YEAR 1990-91.

1990-91ನೇ ಸಾಲಿನಲ್ಲಿ ಹೈದ್ರಾಬಾದ್ - ಕರ್ನಾಟಕ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ವಿವಿಧ ಕಾಮಗಾರಿಗಳಿಗಾಗಿ (ಜಿಲ್ಲಾವಾರು ಮತ್ತು ವಲಯವಾರು) ಖರ್ಚು ಮಾಡಿರುವ ವಿವರದ ಪಟ್ಟಿ.

	Expenditure Districtwise ಜಿಲ್ಲಾವಾರು ವೆಚ್ಚ					
	Gulbarga ಗುಲ್ಬರ್ಗಾ	Bidar ಬೀದರ್	Raichur ರಾಯಚೂರು	Bellary ಬಳ್ಳಾರಿ		
1. Education ಶಿಕ್ಷಣ	**225.00 129.06	83.96	118.50	85.523	642.043	*Gulbarga University
2. Co-operation ಸಹಕಾರ	–	910.00#	25.00	–	935.00	Share Capital Contribution to the Naranja Sahakara
3. Zilla Parishads (MLA/MLC works) ಜಿಲ್ಲಾ ಪರಿಷತ್ (ಶಾಸಕರ ಕ್ಷೇತ್ರವಾರು ಕಾಮಗಾರಿಗಳು)	126.00	150.00	224.00	100.00	600.00	
4. Major & Medium Irrigation ಭಾರಿ ಹಾಗೂ ಮಧ್ಯಮ ನೀರಾವರಿ	34.06	177.20	–	21.58	–	
5. Minor Irrigation ಸಣ್ಣ ನೀರಾವರಿ	55.92	2.29	69.30	29.28	156.79	

1	2	3	4	5	6	7	
6.	Roads & Bridges ರಸ್ತೆ ಮತ್ತು ಸೇತುವೆಗಳು	234.15	96.89	192.12	54.27	577.43	
7.	Rural Water Supply Schemes ಗ್ರಾಮೀಣ ನೀರು ಸರಬರಾಜು ಯೋಜನೆ	2.06	7.75	21.20	3.97	34.98	
8.	Water Supply & Drainage Schemes ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆ	347.57	45.92	71.23	501.77	966.49	
9.	Health & Family Welfare Programme. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯಕ್ರಮ	48.38 *50.00	96.45	49.67	50.09	294.59	*Cancer Hospital Gulbarga
10.	Electrification Programme ವಿದ್ಯುದ್ದೀಕರಣ ಕಾರ್ಯಕ್ರಮ	142.34	142.34	142.33	142.33	569.38	
		1394.54	1712.80	913.35	988.813	5009.543	

HYDERABAD – KARNATAKA AREA DEVELOPMENT PROGRAMME

ಹೈದ್ರಾಬಾದ್ - ಕರ್ನಾಟಕ ಪ್ರದೇಶಾಭಿವೃದ್ಧಿ ಕಾರ್ಯಕ್ರಮ

Statement showing the Sector-wise and District-wise expenditure of 1990-91 and allocation/Expenditure of 1991-92 (to end of 15-2-1992)

1991-92ನೇ ಸಾಲಿನಲ್ಲಿ ಹೈದ್ರಾಬಾದ್ - ಕರ್ನಾಟಕ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ದಿನಾಂಕ 15-2-92ರವರೆಗೆ ವಿವಿಧ ಕಾಮಗಾರಿಗಳಿಗಾಗಿ (ಜಿಲ್ಲಾವಾರು ಮತ್ತು ವಲಯವಾರು) ಖರ್ಚು ಮಾಡಿರುವ ವಿವರದ ಪಟ್ಟಿ.

(Rs. in Lakhs) (ಲಕ್ಷ ರೂಪಾಯಿಗಳಲ್ಲಿ)

Sl.No ಕ್ರಮ.ಸಂಖ್ಯೆ	Sectors ವಲಯಗಳು	1991-92 ರಲ್ಲಿ ಒದಗಿಸಲಾಗಿರುವ ಹಣ	Expenditure during the year to end of 15th February 1992. ಪ್ರಸಕ್ತ ಸಾಲಿನಲ್ಲಿ ದಿನಾಂಕ 15-2-92ರ ವರೆಗಿನ ಖರ್ಚು				
			Bellary ಬಳ್ಳಾರಿ	Gulbarga ಗುಲ್ಬರ್ಗಾ	Raichur ರಾಯಚೂರು	Bidar ಬೀದರ್	
1	2	3	4	5	6	7	8
1.	Roads and Bridges ರಸ್ತೆ ಮತ್ತು ಸೇತುವೆಗಳು	1125.00	161.34	380.21	249.37	102.13	893.05
2.	Major and Medium Irrigation ಭಾರಿ ಹಾಗೂ ಮಧ್ಯಮ ನೀರಾವರಿ ಯೋಜನೆಗಳು	225.00	89.26	22.19	15.16	93.95	220.56
3.	Minor Irrigation ಸಣ್ಣ ನೀರಾವರಿ	420.00	12.84	91.63	6.84	10.53	121.84
4.	Education ಶಿಕ್ಷಣ	850.00	103.66	221.23	103.09	93.53	521.51
5.	Rural Development & Panchyat Raj ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್	939.00	–	–	–	–	–

1	2	3	4	5	6	7	8
5.	a) M.L.A.'S Constituancy Works ಅ) ಶಾಸಕರ ಕ್ಷೇತ್ರವಾರು ಕಾಮಗಾರಿಗಳು	–	154.20	197.00	176.00	108.00	635.20
	b) Rural Water Suply Programme ಆ) ಗ್ರಾಮೀಣ ನೀರು ಸರಬರಾಜು ಯೋಜನೆ	–	83.00	35.00	97.00	2.00	217.00
6.	K.U.W.S & D.E. ನಗರ ನೀರು ಸರಬರಾಜು ಹಾಗೂ ಒಳಚರಂಡಿ ಯೋಜನೆ	600.00	101.82	360.61	116.08	11.22	589.73
7.	Health & Family Welfare Programme ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯಕ್ರಮ	250.00	21.63	32.51	19.30	48.02	121.46
8.	Co-Operation ಸಹಕಾರ	66.00	–	–	–	–	–
9.	K.E.B. ವಿದ್ಯುಚ್ಛಕ್ತಿ	500.00	50.00	50.00	50.00	50.00	200.00
10.	Establishment ಸಿಬ್ಬಂದಿ	25.00	--	–	–	–	2.00
	Total ಒಟ್ಟು	5000.00	777.75	1390.38	832.84	519.38	3522.35

Total amount released - Rs 0.00 Crores.
ಒಟ್ಟು ಬಿಡುಗಡೆಯಾದ ಮೊತ್ತ
Expenditure up to the end of 15-2-92 Rs. 3522.35 Lakhs.
ಇದುವರೆಗೂ ವಿಚ್ಯುದ ಮೊತ್ತ
Remaining amount Rs. 4.8 Crores with Divisional Commissioner, Gulbarga for Clearing pending Bills.
ಉಳಿದ ಮೊತ್ತ ಗುಲ್ಬರ್ಗ ವಿಭಾಗಾಧಿಕಾರಿಯವರ ಬಳಿ ಬಾಕಿ ಬಿಲ್ಲುಗಳ ಪಾವತಿಗಾಗಿ ಇದೆ.

ಶ್ರೀ ಹೆಚ್.ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿಯನ್ನು ಹಿಂದಿನ ಮುಖ್ಯಮಂತ್ರಿಗಳಾದ ಶ್ರೀಮಾನ್ ವೀರೇಂದ್ರ ಪಾಟೀಲರು ರಚನೆ ಮಾಡಿದರು. ಈಗಿನ ಮಾನ್ಯ ಮುಖ್ಯಮಂತ್ರಿಗಳು ಆ ಮಂಡಳಿಗೆ ಸ್ವಾಯತ್ತ ಅಧಿಕಾರವನ್ನು ಕೊಟ್ಟಿರುವುದು ಬಹಳ ಸ್ತುತ್ಯಾರ್ಹವಾದ ಕಾರ್ಯಕ್ರಮ. ಆದರೆ, ಮಲತಾಯಿ ಧೋರಣೆಯನ್ನು ಇಲ್ಲಿ ಅನುಸರಿಸಿಲ್ಲ ಎಂದು ಉತ್ತರವನ್ನು ಕೊಟ್ಟಿದ್ದಾರೆ. 1989-90ನೇ ಸಾಲಿನಲ್ಲಿ ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಬಿಡುಗಡೆಯಾದ ಹಣದಲ್ಲಿ ಸಂಪೂರ್ಣವಾಗಿ ಮೂರು ಜಿಲ್ಲೆಗಳಲ್ಲಿ ಒಂದು ದೂರು ಬಿಟ್ಟು, ಕೇವಲ ಗುಲ್ಬರ್ಗ ಡೆವಲಪ್‌ಮೆಂಟ್ ಬೋರ್ಡ್ ಎನ್ನತಕ್ಕಂಥ ರೀತಿಯಲ್ಲಿ ಅನುದಾನ ಖರ್ಚಾಗುತ್ತಿರುವುದು ಗೊತ್ತಾಗುತ್ತಿದೆ. ಈ ಒಂದು ಸ್ವಾಯತ್ತ ಮಂಡಳಿಗೆ ಒಬ್ಬ ಅಧಿಕಾರೇತರ ಅಧ್ಯಕ್ಷರನ್ನು ಮತ್ತು ಅಧಿಕಾರೇತರ ಸದಸ್ಯರನ್ನು ನೇಮಕ ಮಾಡಿದರೆ ಯಾವುದೇ ಕೆಲಸ ಕಾರ್ಯಗಳನ್ನು ಬದಲಾವಣೆ ಮಾಡುವುದಕ್ಕೆ ಅಂದರೆ ರಸ್ತೆ ಕಾಮಗಾರಿಗಳು ಯಾವುದೇ ಆಗಿರಲಿ, ಅವುಗಳನ್ನು ಸರಿಯಾಗಿ ಬದಲಾವಣೆ ಮಾಡಬೇಕೆಂದು ಇಚ್ಛಿಪಟ್ಟಾಗ ಅದು ಹೈ ಪವರ್ ಕಮಿಟಿ ಮುಂದೆ ಬರಬೇಕು. ಮಾನ್ಯ ಮುಖ್ಯಮಂತ್ರಿಗಳು ಇರುವುದರಿಂದ ಇದನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಹೀಗಾಗಿ ಹಣವೆಲ್ಲವೂ ಲ್ಯಾಪ್ಸ್ ಆಗತಕ್ಕಂಥ ಪರಿಸ್ಥಿತಿ ಇದೆ. ಆದುದರಿಂದ, ದಯವಿಟ್ಟು, ಈ ಒಂದು ಸ್ವಾಯತ್ತ ಮಂಡಳಿಗೆ ಒಬ್ಬ ಅಧಿಕಾರೇತರ ಅಧ್ಯಕ್ಷರನ್ನು ಮತ್ತು ಒಬ್ಬ ಅಧಿಕಾರೇತರ ಸದಸ್ಯರನ್ನು ನೇಮಕ ಮಾಡಿ, ಈ ಒಂದು ಪ್ರಾದೇಶಿಕ ಮಟ್ಟದ ಅಸಮತೋಲನವನ್ನು ನಿವಾರಿಸುವಲ್ಲಿ ಕ್ರಮ ಕೈಗೊಳ್ಳಬೇಕೆಂದು ತಮ್ಮನ್ನು ಆಗ್ರಹಪೂರ್ವಕವಾಗಿ ವಿನಂತಿಸುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ:- ಅಧ್ಯಕ್ಷರೆ, ಅದು ಈಗ ತಾನೆ ಮಾನ್ಯ ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆದುಕೊಂಡು ಬಂದಿದೆ. ಜೇರ್‌ಮನ್ ಮಾಡುವುದರ ಬಗ್ಗೆ ನಾವು ಈಗ ನಿಗಾ ತೆಗೆದುಕೊಂಡಿದ್ದೇವೆ. ಆದನ್ನು ಈ ಕೂಡಲೆ ಮಾಡಿಕೊಡುತ್ತೇವೆ.

ಜಿಲ್ಲಾ ಕೇಂದ್ರಗಳಲ್ಲಿ ಧ್ವಜಾರೋಹಣ

105(806). ಶ್ರೀಮಂಜುನಾಥ ಸಿ ಕುನ್ನೂರು (ಶಿಗ್ಗಾಂವ):- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧ್ವಜ ಸಂಹಿತೆಯ ಪ್ರಕಾರ ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಧ್ವಜಾರೋಹಣ ಯಾರು ಮಾಡಬೇಕಾಗುವುದು?

ಆ) ಈ ಬಗ್ಗೆ ಧ್ವಜ ಸಂಹಿತೆಯಲ್ಲಿ ಧ್ವಜಾರೋಹಣ ಕಾನೂನು ಅಡಿ ಕಾರ್ಯೆಯನ್ನು ಸಾರ್ವಜನಿಕ ಪ್ರತಿನಿಧಿಗಳಿಂದ ಧ್ವಜಾರೋಹಣ ಮಾಡುವಂತೆ ಸೂಕ್ತ ತಿದ್ದುಪಡಿ ಮಾಡಿ ಆದೇಶ ಹೊರಡಿಸಲಾಗುವುದೇ?

ಮುಖ್ಯ ಮಂತ್ರಿಗಳ ಪರವಾಗಿ ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಭಕಾರಿ ಸಚಿವರು):-

ಅ) ಧ್ವಜ ಸಂಹಿತೆಯ ನಿಯಮಗಳನುಸಾರ ಕೇಂದ್ರ ಸರ್ಕಾರದವರು ನೀಡಿದ ಸ್ಪಷ್ಟೀಕರಣದನ್ವಯ ತಾಲ್ಲೂಕು ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಅಲ್ಲಿಯ ಹಿರಿಯ ಸರ್ಕಾರದ ಪ್ರತಿನಿಧಿ ಅಂದರೆ ಗೌರ್ನರ್, ಮುಖ್ಯ ಮಂತ್ರಿಗಳು, ಸಚಿವರು, ಕಮೀಷನರ್, ಜಿಲ್ಲಾಧಿಕಾರಿಗಳು, ಕಲೆಕ್ಟರ್, ತಹಶೀಲ್ದಾರ್ ಇವರಲ್ಲಿ ಯಾರಾದರೂ ರಾಷ್ಟ್ರೀಯ ಹಬ್ಬಗಳಂದು ಧ್ವಜಾರೋಹಣ ಮಾಡಬಹುದು.

ಆ) ಧ್ವಜ ಸಂಹಿತೆಯ ತಿದ್ದುಪಡಿ ಮಾಡಲು ಭಾರತ ಸರ್ಕಾರದವರು ಕ್ರಮ ಕೈಗೊಳ್ಳಬೇಕಾಗುತ್ತದೆ.

ಶ್ರೀ ಮಂಜುನಾಥ ಸಿ. ಕುನ್ನೂರು:- ಸಾಮಾನ್ಯ ಅಧ್ಯಕ್ಷರೆ, ಧ್ವಜ ಸಂಹಿತೆಯ ನಿಯಮಾವಳಿಯ ಪ್ರಕಾರ ತಾಲ್ಲೂಕು ಮತ್ತು ಜಿಲ್ಲಾ ಮುಖ್ಯ ಕೇಂದ್ರಗಳಲ್ಲಿ ಧ್ವಜಾರೋಹಣವನ್ನು ಯಾರು ಮಾಡಬೇಕಾಗುವುದೆಂದು ಕೇಳಲಾದ ಪ್ರಶ್ನೆಗೆ ಉತ್ತರವಾಗಿ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಸೀನಿಯರ್ ಪಬ್ಲಿಕ್ ರೆಪ್ರಸೆಂಟೇಟೀವ್ ಅಂದರೆ ತಹಶೀಲ್ದಾರರು ಮತ್ತು ಕಲೆಕ್ಟರ್‌ಗಳು ಕಾನೂನಡಿಯಲ್ಲಿ ಧ್ವಜಾರೋಹಣವನ್ನು ಮಾಡಬೇಕಾಗುವುದೆಂದು ತಿಳಿಸಿದ್ದಾರೆ. ಆದರೆ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಇವತ್ತು ತಾಲ್ಲೂಕು ಮುಖ್ಯ ಕೇಂದ್ರಗಳಿರಬಹುದು ಅಥವಾ ಜಿಲ್ಲಾ ಮುಖ್ಯ ಕೇಂದ್ರಗಳಿರಬಹುದು, ಅಲ್ಲಿ ಕೆಲವು ಸಂಧರ್ಬಗಳಲ್ಲಿ ಮಂತ್ರಿಗಳು ಧ್ವಜಾರೋಹಣ ಮಾಡುತ್ತಿದ್ದಾರೆ. ಅದೇ ಪ್ರಕಾರವಾಗಿ ರಾಜ್ಯದಲ್ಲಿ ಮುಖ್ಯಮಂತ್ರಿಗಳು, ರಾಷ್ಟ್ರದಲ್ಲಿ ಪ್ರಧಾನ ಮಂತ್ರಿಗಳು ಧ್ವಜಾರೋಹಣವನ್ನು ಮಾಡುತ್ತಿದ್ದಾರೆ. ಆ